INSPECTION CONDUCTED AT KUNTANAHALLI VILLAGE PRIMARY SCHOOL

494. SRI G. RAME GOWDA (Doddaballapur):—

Will the Minister for Education be pleased to state:—

(*a*) the strength of students in each class of Kuntanahally Village Primary School, Kasaba Hobli, Doddaballapur Taluk;

(*b*) the number of teachers posted to that school since 1967;

(*c*) the period for which of each such teachers has worked in that school:

(*d*) the number of inspections conducted by D.E.O., A.E.O., each year since 1967 (date-war information may be furnished)?

SRI N. M. KOTRABASAIAH SOGI (Deputy Minister for Education):—

(*a*)

I	II	III	IV	Total
35	6	6	6	53

(*b*) 4

(*c*) (1) Sri S. Ullangaiah from 1st January 1964 to 31st July 1968.

(2) Sri K.Satyanarayana Rao from 30th October 1968 to 18th December 1968.

(3) Sri Munigangaiah from 31st January 1966 to 11th April 1969.

(4) Sri Chikkassiddaiah is since 23rd may 1969 and he is continued till now.

(*d*) Nil. However, the concerned Inspector of Schools undertook an inspectiom in 1967 and the concerned Deputy Inspector of Schools inspected the Schools in 1968 and 1969.

ಶ್ರೀ ಜಿ. ರಾಮೇಗೌಡ.—ಎರಡು ತಿಂಗಳ ಕಾಲ ಪಾಠಶಾಲೆಯಲ್ಲಿ ಉಪಾಧ್ಯಾಯರು ಇರಲಿಲ್ಲ. ಇದರ ವ್ಯವಸ್ಥೆ ಏನಾಗಿತ್ತು?

†ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಒಬ್ಬರು ಟ್ರೈನ್ಡ್ ಸಬ್ ಟ್ಯಿಟ್ಯೂಟನ್ನು ಪೋಸ್ಟ್ ಮಾಡಿದ್ದರು. ಅವರು ಟೆಂಪೋರರಿಯಾಗಿ ಕೆಲಸ ಮಾಡುತ್ತಾ ಇದ್ದರು.

ಶ್ರೀ ಸಿ. ಆರ್. ರಂಗೇಗೌಡ.—ಈ ಕುಂಟನಹಳ್ಳಿ ಗ್ರಾಮ ದೊಡ್ಡಬಳ್ಳಾಪುರಕ್ಕೆ ಮೂರು ಮೈಲಿ ದೂರದಲ್ಲಿದೆ. ೧೯೬೭ ರಿಂದ ಇಲ್ಲಿಯವರೆಗೂ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ರವರು ತನಿಖೆ ಮಾಡದೇ ಇರುವುದಕ್ಕೆ ಕಾರಣವೇನು? ಅವರಿಗೆ ಇನ್ನೇನು ಕೆಲಸ ವಹಿಸಿದಿ ರಿ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಸಾಮಾನ್ಯವಾಗಿ ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಡೆಪ್ಯೂಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ರವರು ಇನ್‌ಸ್ಪೆಕ್ಟ್ ಮಾಡುತ್ತಾರೆ. ಅವರು ೨-೩ ಸಲ ಇನ್‌ಸ್ಪೆಕ್ಟ್ ಮಾಡಿದ್ದಾರೆ. ೧೧-೧-೬೮ ಮತ್ತು ೬-೩-೬೯ರಲ್ಲಿ ತನಿಖೆ ಮಾಡಿದ್ದಾರೆ.

ಶ್ರೀ ಜಿ. ರಾಮೇಗೌಡ.—ಎಇಒ ಹೆಡ್‌ಕ್ವಾರ್ಟರ್ಸ್ ದೊಡ್ಡಬಳ್ಳಾಪುರ ಅವರು ಮೂರು ವರ್ಷಗಳಿಂದ ಒಂದು ಸಲ ಕೂಡ ಹೋಗಿ ತನಿಖೆ ಮಾಡಿಲ್ಲ. ಅವರನ್ನು ಅಲ್ಲಿಂದ ಮೂರು ಸಲ ಟ್ರಾನ್ಸ್‌ಫರ್ ಮಾಡಲಾಗಿತ್ತು. ಮೂರು ಸಲವೂ ಕ್ಯಾನ್ಸಲ್ ಆಗಿ ಅವರು ಅಲ್ಲಿಯೇ ಇದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ —ಸಾಮಾನ್ಯವಾಗಿ ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ರವರು ಇನ್‌ಸ್ಪೆಕ್ಟ್ ಮಾಡುತ್ತಾರೆ. ೨-೩ ಸಲ ಆ ಸ್ಕೂಲನ್ನು ಇನ್‌ಸ್ಪೆಕ್ಷನ್ ಮಾಡಿದ್ದಾರೆ ಡಿ.ಇ.ಓ.ರವರು ಹೈಸ್ಕೂಲ್ಸ್ ಮತ್ತು ಹೈಯರ್ ಸೆಕೆಂಡರಿ ಸ್ಕೂಲ್ಸ್‌ನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ.

ಶ್ರೀ ಅಜೀಜ್ ಸೇಟ್.—ಅನೇಕ ಕಾರಣಗಳಿಗಾಗಿ ಸ್ಕೂಲುಗಳು ಕ್ಲೋಸ್ ಆಗಿವೆ, ಮೊನ್ನೆ ಚಿತ್ರದುರ್ಗದಲ್ಲಿ ಇದೇ ರೀತಿ ಆದದ್ದನ್ನು ಹೇಳಿದರು. ಇದೇ ರೀತಿ ಪಟ್ಟಣದಲ್ಲಿ, ಹಳ್ಳಿಯಲ್ಲಿ, ತಾಲ್ಲೂಕಿನಲ್ಲಿ ಉಪಾಧ್ಯಾಯರ ಗಳು ಹೆಗ್ಗಣಗಳಾಗಿ ರಾಜಕೀಯದಲ್ಲಿ ಭಾಗದಾರರಾಗಿದ್ದಾರೆ. ಇದಕ್ಕೆ ಕಾರಣ ಅವರು ಒಂದೇ ಊರಿನಲ್ಲಿ ೧೫-೨೦ ವರ್ಷಗಳಿಂದ ಇರುವುದು ಅಂತ ಅನ್ನುವುದು ತಮಗೆ ಗೊತ್ತಾಗುವುದಿಲ್ಲವೇ? ನಮ್ಮ ಮೈಸೂರು ಸಿಟಿಯಲ್ಲಿ ಎರಡು ಕುಟುಂಬದವರು ೧೬ ಜನ ಡಿ ಇ ಓ ಆಫೀಸು ಮತ್ತು ಸ್ಕೂಲುಗಳಲ್ಲಿ ಇದ್ದಾರೆ, ವೈಫು, ಮದರ್-ಇನ್-ಲಾ, ಸಿಸ್ಟರು, ಸಿಸ್ಟರ್ ಇನ್‌ಲಾ, ಬ್ರದರ್, ಬ್ರದರ್-ಇನ್-ಲಾ ಈ ರೀತಿ ಒಂದು ಎಂಜಿನ್ ನೂರಾರು ಡಬ್ಬಿಗಳನ್ನು ಇಟ್ಟುಕೊಂಡು ವಿದ್ಯಾಭ್ಯಾಸದ ಇಲಾಖೆಯನ್ನು ನಡೆಸುತ್ತಿರುವುದು ಸರಿಯೇ? ಇದು ತಮಗೆ ಗೊತ್ತಿಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಮಾನ್ಯ ಸದಸ್ಯರು ಹೇಳಿದಂತಹ ಪರಿಸ್ಥಿತಿ ಯಾವುದೂ ಇಲ್ಲ. ಡಿ ಇ ಒ ರವರು ಇಡೀ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದಾರೆ. ಇಡೀ ಜಿಲ್ಲೆಯಲ್ಲಿ ಸಾವಿರಗಟ್ಟಲೆ ಶಾಲೆಗಳು ಇರುತ್ತವೆ. ಪ್ರತಿಯೊಂದನ್ನೂ ಅವರೇ ಇನ್‌ಸ್ಪೆಕ್ಟ್ ಮಾಡಬೇಕೆಂದರೆ ಆಗದ ಮಾತು. ಆದ್ದರಿಂದ ಡೆಪ್ಯೂಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಇರುತ್ತಾರೆ. ಅವರು ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ. ಆ ರೀತಿ ಅವರು ಮಾಡಿದ್ದಾರೆ. ಇದರ ಜೊತೆಗೆ ಊರಿನ ಜನರೂ ಸಹ ಸಹಕಾರ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಉಪಾಧ್ಯಾಯರೇ ಇಲ್ಲದ ಸ್ಕೂಲುಗಳನ್ನು ತೆಗೆಯುವ ಯೋಜನೆ ಸರ್ಕಾರದವರಿಗೆ ಏನಾದರೂ ಇದೆಯೇ? (ನಗು)

ಶ್ರೀ ಎನ್, ಎಂ. ಕೊಟ್ರಬಸಯ್ಯಸೋಗಿ.—ಅಂತಹ ಯೋಜನೆ ಯಾವುದೂ ಇಲ್ಲ.

EDUCATED UNEMPLOYED GIRLS IN K.G.F.

528. SRI S. R. SHANMUGAM (K.G.F.).—

Will the Minister for Law, Labour and Parliamentary Affairs be pleaesd to state.—

(a) whether the Government is aware that thousands of educated unemployed young girls are available in Kolar Gold Fields for employment: